# ಲೆವ್ ವೈಗೋಟ್ಸ್ಕಿ (1896-1934)

## ಇಂದಿರಾ ಜೈಪ್ರಕಾಶ್



***

ವೈಗೋಟ್ಸ್ಕಿಯನ್ನು 'ಮನೋವಿಜ್ಞಾನದ ಮೊಝಾರ್ಟ್ (Mozart of Psychology)' ಎಂದು ಕರೆಯಲಾಗಿದೆ. ಮೊಝಾರ್ಟ್ ಆಸ್ಟ್ರಿಯಾದ ಅತ್ಯಂತ ಪ್ರತಿಭಾವಂತ ಸಂಗೀತ ಕೃತಿಕಾರನಾಗಿದ್ದು ಕೇವಲ 35 ವರ್ಷಗಳಲ್ಲಿ ಯೂರೋಪಿನ ಸಂಗೀತಕ್ಷೇತ್ರವನ್ನು ಸಮ್ಮೋಹನಗೊಳಿಸಿದ್ದನು. ಅದೇ ರೀತಿ 38 ವರ್ಷ ಮಾತ್ರ ಬದುಕಿದ್ದ ವೈಗೋಟ್ಸ್ಕಿ ವಯಸ್ಸಿಗೆ ಮೀರಿದ ಸಾಧನೆ ಮಾಡಿದ್ದವನು ಎಂದು ಗುರುತಿಸಲ್ಪಡುತ್ತಾನೆ.

ವೈಗೋಟ್ಸ್ಕಿ ಹಿಂದೆ ರಶಿಯಾದ ಪ್ರಾಂತ್ಯವಾಗಿದ್ದ ಬೆಲಾರಸ್‌ನಲ್ಲಿ ಕಲಾ ಪ್ರೇಮಿಗಳಾಗಿದ್ದ ಯಹೂದಿ ಕುಟುಂಬದಲ್ಲಿ ಹುಟ್ಟಿದ್ದನು. ರಶಿಯಾದಲ್ಲಿ ಆಗ 'ಜ್ಯೂಯಿಶ್ ಲಾಟರಿ (Jewish Lottery)' ಎಂಬ ಪದ್ಧತಿಯ ಪ್ರಕಾರ ನೂರರಲ್ಲಿ ಮೂವರು ಯಹೂದಿಗಳಿಗೆ (three out of hundred) ಮಾತ್ರ ವಿಶ್ವವಿದ್ಯಾಲಯ ಸೇರಲು ಸಾಧ್ಯವಿತ್ತು. ಈ ಅವಕಾಶ ಪಡೆದು ಅವನು ಕಾನೂನು ಅಭ್ಯಾಸ ಮಾಡಿದ. ಗೊಮೆಲ್ ಎನ್ನುವ ಕಾಲೇಜಿನಲ್ಲಿ ತತ್ವಶಾಸ್ತ್ರ, ಮನಶ್ಯಾಸ್ತ್ರ ಕಲಿಸುವ ಶಿಕ್ಷಕನಾಗಿ ಸೇರಿದ್ದ. 1924ರಲ್ಲಿ ನರಮನೋವಿಜ್ಞಾನದ ವಿಚಾರ ಸಂಕಿರಣದಲ್ಲಿ ಅವನ ಉಪನ್ಯಾಸ ಎಷ್ಟು ಪ್ರಭಾವಕಾರಿಯಾಗಿತ್ತು ಎಂದರೆ ಅವನನ್ನು ಮಾಸ್ಕೋ ಪ್ರಾಯೋಗಿಕ ಮನೋವಿಜ್ಞಾನ ಸಂಸ್ಥೆ ಆಹ್ವಾನಿಸಿತು. ಇಲ್ಲಿ ಈತ ಒಂಬತ್ತು ವರ್ಷಗಳ ಕಾಲ ಮಕ್ಕಳ ವಿಕಾಸ ಮತ್ತು ಸಂಜ್ಞಾನದ ಅಧ್ಯಯನದಲ್ಲಿ ಸಂಶೋಧನೆ ನಡೆಸಿ ಈ ವಿಷಯದಲ್ಲಿ ತನ್ನ ಸಿದ್ಧಾಂತ ಮಂಡಿಸಿದ್ದ.

ವೈಗೋಟ್ಸ್ಕಿಯ ಶಿಶು ವಿಕಾಸದ ಕಲ್ಪನೆ ಅವನ ಸಮಕಾಲೀನನಾಗಿದ್ದ ಪಿಯಾಝೆಯ ಸಿದ್ಧಾಂತಕ್ಕೆ ಭಿನ್ನವಾಗಿತ್ತು. ಪಿಯಾಝೆಯ ಪ್ರಕಾರ ಸಂಜ್ಞಾನದ ಆರಂಭಿಕ ಹಂತಗಳು ಸಾರ್ವತ್ರಿಕವಾಗಿರುತ್ತವೆ. ಎಂದರೆ ಎಲ್ಲಾ ಮಕ್ಕಳಲ್ಲೂ ಒಂದೇ ರೀತಿಯ ಸಂಜ್ಞಾನದ ಹಂತಗಳನ್ನು ಅವರ ವಯಸ್ಸಿಗೆ ತಕ್ಕಂತೆ ನೋಡಬಹುದು. ಆದರೆ ವೈಗೋಟ್ಸ್ಕಿ ಸಂಜ್ಞಾನದ ವಿಕಾಸದಲ್ಲಿ ಸಮಾಜದ ಪ್ರಭಾವ ಗುರುತಿಸಿದ್ದ. ವೈಗೋಟ್ಸ್ಕಿ ಶಿಶುವಿನ ಪರಿಸರ ಮತ್ತು ಸಾಮಾಜಿಕ ನಿಯಮಗಳು ವಿಕಾಸದ ಮೇಲೆ ಪ್ರಭಾವ ಬೀರುತ್ತವೆ, ಆದುದರಿಂದ ಪ್ರತಿ ಸಂಸ್ಕತಿಯಲ್ಲೂ ಮಕ್ಕಳ ಬೆಳವಣಿಗೆ

ವಿಭಿನ್ನವಾಗಿರುತ್ತದೆ ಎಂದು ಸಾಮಾಜಿಕ-ಸಾಂಸ್ಕೃತಿಕ ವಾದ ಮುಂದಿಟ್ಟ. ಇವನ ಎರಡು ಸಂಕಲ್ಪನೆಗಳು- 'ಶಿಶುವಿಗಿಂತ ಹೆಚ್ಚು ಜ್ಞಾನವುಳ್ಳವರು' ಮತ್ತು 'ಸಮೀಪಸ್ಥ ವಿಕಾಸದ ವಲಯ (Zone of Proximal Development)' ಎಂಬುವು ಬಹಳ ಪ್ರಭಾವ ಬೀರಿದವು. ಪಾಲಕರು, ಹಿರಿಯರು, ಶಿಕ್ಷಕರು ಮುಂತಾದವರು ಮಗುವಿಗಿಂತ ಹೆಚ್ಚು ಅನುಭವಸ್ಥರಾಗಿರುತ್ತಾರೆ. ಇವರು ಶಿಶುವಿನ ಬುದ್ಧಿಶಕ್ತಿಯ ಬೆಳವಣಿಗೆಗೆ ನೆರವಾಗುತ್ತಾರೆ. ಮಗು ತಾನಾಗಿಯೇ ಮಾಡಬಹುದಾದದ್ದು ಮತ್ತು ಹಿರಿಯರ ನೆರವಿನಿಂದ ಸಾಧಿಸಬಹುದಾದ್ದರ ನಡುವೆ ಅಂತರವಿರುತ್ತದೆ. ಇದು ಸಮೀಪಸ್ಥ ವಿಕಾಸದ ವಲಯವಾಗಿದ್ದು ಮಗು ಇತರರ ನೆರವಿನಿಂದ ತನಗೆ ಸಾಧ್ಯವಾಗುವುದಕ್ಕಿಂತ ಹೆಚ್ಚು ಸಾಧಿಸಬಹುದು. ತನಗೆ ತಾನೆ ಸೂಚನೆ ಕೊಡುವುದರ ಮೂಲಕ ಮಗು ತನ್ನನ್ನು ನಿಯಂತ್ರಿಸುವುದನ್ನು ಕಲಿಯುತ್ತದೆ.

ಮುಂದೆ ವೈಗೋಟ್ಸ್ಕಿ ಹದಿಹರೆಯದ ವಿಕಾಸದ ಬಗ್ಗೆ ವಿಚಾರ ನಡೆಸಿದ್ದ. ಒಂದು ಪರಿಸರದ ಭಾಷೆ, ಸಂಸ್ಕೃತಿ, ಉಪಕರಣಗಳ ಬಳಕೆ ಇವು ಅಂತರವ್ಯಕ್ತೀಯ ಸಂಬಂಧಗಳೊಡನೆ ಬೆರೆತು ಉಚ್ಚಮಟ್ಟದ ಮಾನಸಿಕ ಕ್ರಿಯೆಗಳಿಗೆ ಕಾರಣವಾಗುತ್ತವೆ ಎಂದು ವಾದಿಸಿದ್ದ. ಇವನ 'ಪೆಡಗಾಗಿಕಲ್ ಸೈಕಾಲಜಿ (Pedagogical Psychology)' ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಯಿತು. 1925ರಲ್ಲಿ ಲಂಡನ್‌ನಲ್ಲಿ ಕಿವುಡು ಮಕ್ಕಳ ಶಿಕ್ಷಣದ ಬಗ್ಗೆ ನಡೆದ ಸಮಾವೇಶದಿಂದ ಮರಳಿದವನಿಗೆ ಕ್ಷಯರೋಗ ಉಲ್ಬಣವಾಗಿ ಆಸ್ಪತ್ರೆ ಸೇರಿದ. ಆರೋಗ್ಯ ಸುಧಾರಿಸಿದ ಮೇಲೆ 1926 ರಿಂದ 1930 ರವರೆಗೆ ತಾರ್ಕಿಕ ಸ್ಮೃತಿ, ಅವಧಾನ, ನಿರ್ಧಾರಣೆ, ಭಾಷಾಜ್ಞಾನ ಮುಂತಾದವುಗಳ ವಿಕಾಸವನ್ನು ಅಭ್ಯಸಿಸತೊಡಗಿದ. ಅಲೆಕ್ಸಾಂಡರ್ ಲೂರಿಯಾ, ಬೋರಿಸ್ ವಾರ್ಶಾವಾ ಮುಂತಾದ ಶಿಷ್ಯರು ಅವನ ಸಂಶೋಧನೆಗೆ ಸಹಾಯಕರಾಗಿದ್ದರು.

1930 ರ ಹೊತ್ತಿಗೆ ವೈಗೋಟ್ಸ್ಕಿಯ ಆಸಕ್ತಿ ಗೆಸ್ಟಾಲ್ಟ್ ಸಿದ್ಧಾಂತಗಳ ಕಡೆ ತಿರುಗಿತು. ಚೇತನದ ಒಂದು ಸಮಗ್ರ ಸಿದ್ಧಾಂತವನ್ನು ಪ್ರಸ್ತಾಪಿಸುವ ಪ್ರಯತ್ನ ಮಾಡಿದ್ದು ಅವನ ಸಾವಿನಿಂದ ಅದು ಅರ್ಧಕ್ಕೆ ನಿಂತಿತ್ತು. ಆರು ಹೊತ್ತಿಗೆಗಳಿದ್ದ ಅವನ ಬರಹಗಳು ಕಲಾ ಮನೋವಿಜ್ಞಾನ, ಮಾನಸಿಕ ಕ್ರಿಯೆಗಳು, ವಿಜ್ಞಾನದ ತತ್ವಶಾಸ್ತ್ರ, ಮನೋವಿಜ್ಞಾನ ಸಂಶೋಧನೆಯ ವಿಧಾನಗಳು, ಭಾಷೆ, ಮಾನವ ವಿಕಾಸ, ಆಟದ ಮನೋವೈಜ್ಞಾನಿಕ ರೂಪ, ಕಲಿಕೆಯ ಸಮಸ್ಯೆಗಳು, ಸಂಸ್ಕೃತಿಯ ಆಂತರೀಕರಣ, ಮಾನಸಿಕ ಪ್ರರೂಪಗಳು ಮುಂತಾದ ಅನೇಕ ವಿಷಯಗಳನ್ನು ಒಳಗೊಂಡಿವೆ.

ವೈಗೋಟ್ಸ್ಕಿ 1924 ರಲ್ಲಿ ರೋಝಾ ಸ್ಮೆಖೋವಾ ಎಂಬುವವಳನ್ನು ವಿವಾಹವಾಗಿದ್ದ. ಅವನ ಅನೇಕ ಬರಹಗಳು ಇನ್ನೂ ಅಪೂರ್ಣವಾಗಿದ್ದಾಗಲೆ ಕ್ಷಯರೋಗಕ್ಕೆ ಬಲಿಯಾಗಿದ್ದ. ಅವನ ಅಧ್ಯಯನಗಳ ಬಗ್ಗೆ ಪಾಶ್ಚಾತ್ಯ ದೇಶಗಳಿಗೆ ಅನೇಕ ವರ್ಷಗಳವರೆಗೆ ತಿಳಿದಿರಲಿಲ್ಲ. ಇದಕ್ಕೆ ಕಾರಣ ಕಮ್ಯೂನಿಸ್ಟರು ಅವನ ವಿಚಾರಗಳನ್ನು ಸೆನ್ಸಾರ್ ಮಾಡಿ ಅದುಮಿಟ್ಟಿದ್ದರು, ಅಲ್ಲದೆ ಅವನು ರಶಿಯನ್ ಭಾಷೆಯಲ್ಲಿ ಬರೆದಿದ್ದು ಆಂಗ್ಲ ಭಾಷೆಗೆ ತರ್ಜುಮೆಯಾಗಿರಲಿಲ್ಲ. ಹೀಗಾಗಿ ಅನೇಕ ಯೂರೋಪ್ ದೇಶಗಳಿಗೆ ಅವನು ಅಪರಿಚಿತನಾಗಿ ಉಳಿದಿದ್ದ. ಅವನ ಮರಣಾನಂತರ ಸರ್ಕಾರ ಅವನನ್ನು ಸೋವಿಯತ್ ಯೂನಿಯನ್‌ನ ಪ್ರಮುಖ ಮನೋವಿಜ್ಞಾನಿ ಎಂದು ಘೋಷಿಸಿತು. ತಡವಾಗಿ ಪಾಶ್ಚಾತ್ಯ ದೇಶವನ್ನು ತಲುಪಿದ ಅವನ ವಿಚಾರಗಳು ಅನೇಕ ಚಿಂತಕರು ಮತ್ತು ಸಂಶೋಧಕರಿಗೆ ಸ್ಫೂರ್ತಿಯಾದವು. 'ವೈಗೋಟ್ಸ್ಕಿ ಸರ್ಕಲ್ (Vygotsky Circle)' ಎಂದು ಸಂಘಟಿತವಾದ ಅವನ ಶಿಷ್ಯ ಸಮೂಹ ಅವನ ಕೆಲಸವನ್ನು ರಶಿಯಾದಲ್ಲಿ ಮುಂದುವರಿಸಿತು.

***